ಅಧ್ಯಕ್ಷರು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

(ಈ ಹಂತದಲ್ಲಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಹಿಂಬಾಕಿ ಹುದ್ದೆಗಳ ಭರ್ತಿಯಲ್ಲಿ ಆಗುತ್ತಿರುವ ವಿಳಂಬ

35 (185) ಶ್ರೀ ಧ್ರುವನಾರಾಯಣ ಆರ್ ಸಂತೇಮರಳ್ಳಿ ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಲವಾರು ಸಂಘ ಸಂಸ್ಥೆಗಳು ಹಿಂಬಾಕಿ ಹುದ್ದೆಗಳ ಭತಿ ಪ್ರಕ್ರಿಯೆ ಕುಂರಿತಗೊಂಡಿದೆ ಎಂದು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರ್ತಿಸಿ ಪ್ರಕಟಣೆ ಹೊರಡಿಸಿ ಭರ್ತಿ ಮಾಡಲಾಗಿದೆ, (ಅಂಕಿಅಂಶಗಳ ಸಮೇತ ವಿವರ ನೀಡುವುದು) ,

ಇ) ಹಿಂಬಾಕಿ ಹುದ್ದೆಗಳ ನೇಮಕಾತಿಯಲ್ಲಿ ಆಗುತ್ತಿರುವ ಮಂದಗತಿಗೆ ಇಲಾಖೆಗಳ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಬ್ಯಾಕ್‌ಲಾಗ್ ಹುದ್ದೆಗಳನ್ನು ದಿನಾಂಕ 21-11-2001ರ ಸರ್ಕಾರಿ ಅಧಿಸೂಚನೆ ಪ್ರಕಾರ ಗುರುತಿಸಿ ಭರ್ತಿ ಮಾಡಲಾಗುತ್ತಿದೆ ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಡಿಸೆಂಬರ್ 2006ರವರೆಗೆ 186 ಹೊಸ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ ಈ ಅವಧಿಯಲ್ಲಿ ಪ್ರಕಟಣೆಗೆ ಬಾಕಿ ಇದ್ದ ಹುದ್ದೆಗಳಲ್ಲಿ 478 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಇಲ್ಲಿಯವರೆಗೆ 13615 ಅಭ್ಯರ್ಥಿಗಳು ಹಿಂಬಾಕಿ ಹುದ್ದೆಗಳ ಎದುರು ಹಾಜರಾಗಿರುತ್ತಾರೆ

ಇ) ವಿಳಂಬವಾಗಿರುವುದಿಲ್ಲ ಆದುದರಿಂದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ

Annexure to Sub-Question (B) 1 (ಅ) of Starred Question No 185

Tabled by Sri Dhruvanarayana R

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
		SC	ST	SC	ST	SC	ST
1	Advocate General						1
2	Agricultural Marketing	1				1	1
3	Collegiate Education						
a	Aided Colleges					-1	2
4	Commerce and Industry					8	2
5	K G I D					2	
6	Karnataka Bhavan, New Delhi						
b	Karnataka Bhavan, Resident Commissioner Office		1		1		
7	Karnataka Appalatte Tribunal					1	
8	Karnataka Lokayukta						2
9	Karnataka Small Savings and Lottery					2	1
10	Mines and Geology					2	
11	NCC					1	
12	Police	-1		-1		64	24
a	KSRP					19	4
13	Prosecution and Govt Litigation						2
14	Public Instructions						
a	High School (Aided)					22	5
15	Public Libraries					2	-1
16	Rural Dev and Panchayat Raj Dept					12	2

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
		SC	ST	SC	ST	SC	ST
17	State Accounts					2	
18	Technical Education						
a	Aided Engineering Colleges					1	
b	Aided Polytechnic					4	-2
19a	Vocational Education	-22	-2				
20	PWD (RDPR)	-23	-4				
21	Agricultural University Dharwad					19	12
22	Agricultural University Hebbal, Bangalore					28	30
23	Karnataka University, Dharwad	-4	-5	-8	-24	-11	1
24	Bangalore Water Supply & Sewarage Board			79	49		
25	Institute of Animal Health, Veternary, Biologicals					1	2
26a	PCARD Bank	194	37				
c	Hopcoms and Other Institutions	38	7				
d	D C C Bank	-10	-5	-10	-5		
h	KCARD Bank			20	6		
i	K M F (Central Office)					1	2
l	Bangalore Urban & Rural Milk Union					3	1
x	Milk Union Gulbarga					1	1
27a	K S R T C (Bangalore Corporation)	-79	5	165	85		
b	B M T C	65	-7	109			

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
28	Karnataka Ware Housing Corpo			32	8		
29	Karnataka Housing Board					14	8
30	Karnataka Land Army Corp						1
31	Karnataka Silk Marketing Board						1
31a	Kar State Agro Corn Products Ltd			-3	-5		
32	Karnataka Police Housing Corp					4	1
33	Karnataka State Handicrafts Devp Corp					1	1
34	Karnataka State Seeds Certificate Agency				-1		
35	Kidwai Memorial Institute of Oncology						2
36	Mysore Sugar Factory, Mandya			-4	-15		
37	Vijayanagara Institute of Medical Science, Bellary					1	
38	Hubli Dharwad City Corporation					1	
	Grand Total	**159**	**27**	**379**	**99**	**205**	**107**
		186		**478**		**312**	

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂಥ ಪ್ರಶ್ನೆಗಳಿಗೆ ಸರಿಯಾದ ಮಾಹಿತಿಗಳನ್ನು ಒದಗಿಸಿಲ್ಲ 2004 ಫೆಬ್ರವರಿ ತಿಂಗಳವರೆಗೆ ಸಮಾಜ ಕಲ್ಯಾಣ ಇಲಾಖೆ ಗುರಿಪಡಿಸಿದ್ದ backlog ಹುದ್ದೆಗಳು 17,021 ಆದರೆ, ಈಗ ಭರ್ತಿ ಮಾಡಿದ ಹುದ್ದೆಗಳು 13,615 ಮತ್ತು ಇನ್ನೂ ಭರ್ತಿ ಮಾಡಬೇಕಾದಂಥ ಹುದ್ದೆಗಳ ಸಂಖ್ಯೆ 3,406 ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಆದರೆ, ಇಲ್ಲಿ ಕೊಟ್ಟಿರುವ ಉತ್ತರದಲಿ ಕೇವಲ 186 ಹುದ್ದೆಗಳನ್ನು ಮಾತ್ರ ಗುರುತಿಸಿದ್ದೇವೆ ಎಂಬ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ backlog ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ವಿಳಂಬ ಮಾಡಿಲ್ಲವೆನ್ನತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದಾರೆ ಪ್ರಸಕ್ತ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗಳಿಗೆ ಕೇವಲ 312 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿದ್ದೇವೆಂದು ಹೇಳಿದ್ದಾರೆ ಅಂದರೆ SC/ST ಪಂಗಡದವರಲ್ಲಿ backlog ಹುದ್ದೆಗಳನ್ನು ತುಂಬುವುದರಲ್ಲಿ ಎಷ್ಟು ತಾತ್ಸಾರ ಮನೋಭಾವನೆ ಇದೆ ಎಂಬುದು ಗೊತ್ತಾಗುತ್ತದೆ ಸುಮಾರು 3,406 backlog ಹುದ್ದೆಳು ಖಾಲಿ ಇವೆ ಆ ಖಾಲಿ ಇರುವ ಹುದ್ದೆಗಳು ಇವೆ ಎನ್ನತಕ್ಕಂಥ ಮಾಹಿತಿಯನ್ನು ಕೂಡ ಕೊಟ್ಟಿಲ್ಲ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಸರಿಯಾದ ಮಾಹಿತಿಯನ್ನು ಸದನಕ್ಕೆ ಒದಗಿಸಿಕೊಡಬೇಕು ಇಲ್ಲಿಯತನಕ SC/ST backlog ಹುದ್ದೆಗಳ ಖಾಲಿ ಇರುವ ಸಂಖ್ಯೆ ಎಷ್ಟು? ಅದನ್ನು ತಾವು ಯಾವಾಗ ಭರ್ತಿ ಮಾಡಿಸುತ್ತೀರಿ? ನಿರ್ದಿಷ್ಟವಾದ ದಿನಾಂಕವನ್ನು ಗುರುತುಪಡಿಸಿ 6 ತಿಂಗಳೊಳಗೆ ಭರ್ತಿ ಮಾಡುತ್ತೇವೆ ಅಥವಾ ಒಂದು ವರ್ಷದೊಳಗೆ ಭರ್ತಿ ಮಾಡುತ್ತೇವೆ ಎನ್ನುವ ಉತ್ತರವನ್ನು ತಾವು ಕೊಡಬೇಕು ತಾವು ಇಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದೀರಿ ಏಕೆಂದರೆ, notification ಪ್ರಕಾರ 17,000 ಹುದ್ದೆಗಳು ಖಾಲಿ ಇವೆ ತಾವು ಕೊಟ್ಟಿರುವುದು 13,000 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆಂದು ಇನ್ನುಳಿದ 3,406 ಹುದ್ದೆಗಳ ಬಗ್ಗೆ ಮಾಹಿತಿಯನ್ನೇ ತಾವು ಕೊಟ್ಟಿಲ್ಲ ಮತ್ತು ಸರ್ಕಾರ ವಿವಿಧ ಇಲಾಖೆಗಳನ್ನು ಹೊರತುಪಡಿಸಿ

ಅಧ್ಯಕ್ಷರು ಪ್ರಶ್ನೆಗಳನ್ನು ಕೇಳುವುದನ್ನು ಬಿಟ್ಟು ನೀವು ಈ ತರಹ ಭಾಷಣ ಮಾಡಿದರೆ ಹೇಗೆ? ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯೊಳಗೆ ಮುಗಿಸಬೇಕೆಂದು ನಾನು ಪುನ ಪುನ ಹೇಳುತ್ತಲೇ ಇದ್ದೇನೆ

(ಗೊಂದಲ)

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ

(ಗೊಂದಲ)

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ನೋಡಿ ಹಾರಿಕೆ ಉತ್ತರ ಕೊಟ್ಟುಬಿಟ್ಟು, ತಪ್ಪು ಮಾಹಿತಿಯನ್ನು ಕೊಟ್ಟುಬಿಟ್ಟು ನೀವು ಈ ತರಹ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ

(ಗೊಂದಲ)

ಅಧ್ಯಕ್ಷರು ಮಾನ್ಯ ಹೊರಟ್ಟಿಯವರೆ, ತಾವು ಈಗ ಉತ್ತರ ಹೇಳಿ

(ಗೊಂದಲ)

ಡಾ ಹೆಚ್ ಸಿ ಮಹಾದೇವಪ್ಪ ಮಾನ್ಯ ಅಧ್ಯಕ್ಷರೆ, 17,000 ಹುದ್ದೆಗಳನ್ನು identify ಮಾಡಿದ್ದೇವೆಂದು ಹಿಂದೆಯೇ ಹೇಳಿದ್ದಾರೆ (ಗೊಂದಲ) ಅವರು ಹಿಂದಿನ ಸಲ ಕೊಟ್ಟಿರುವ ಅಂಕಿಅಂಶವೇ ಬೇರೆ ಈಗ ಕೊಟ್ಟಿರುವ ಮಾಹಿತಿಯೇ ಬೇರೆ ಈ ತರಹ ಮಾಹಿತಿ ಒದಗಿಸಿದರೆ ಹೇಗೆ? Backlog ಹುದ್ದೆ SC/ST ಜನಾಂಗದವರಿಗೆ ರಾಜ್ಯಾಂಗಬದ್ಧವಾದ ಹಕ್ಕು ನಾವೆಲ್ಲ ಸೇರಿ ಅದನ್ನು ಅವರಿಗೆ ತುಂಬಿಕೊಡಬೇಕು 17,000ಗಿಂತಲೂ ಹೆಚ್ಚು ಹುದ್ದೆಗಳು ಇವೆಯೆಂದು identify ಮಾಡಿ ಈಗ ಕೆಲವೇ 100 ಹುದ್ದೆಗಳಿವೆ ಎಂದು ಈ ವರ್ಷ ಕೊಟ್ಟು ಇಷ್ಟು ಕಡಿಮೆ ಹುದ್ದೆಗಳನ್ನು ತುಂಬಿ ಈ ರೀತಿ ಉತ್ತರ ಕೊಟ್ಟರೆ ಸರ್ಕಾರ ಯಾವ ರೀತಿ ನಡೆಯುತ್ತದೆ? ಯಾವ ರೀತಿ ಅವರಿಗೆ ನ್ಯಾಯ ಸಿಗುತ್ತದೆ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಸಮಾಜ ಕಲ್ಯಾಣ ಸಚಿವರ ಪರವಾಗಿ) – ಮಾನ್ಯ ಅಧ್ಯಕ್ಷರೆ, ಇದು continuous process ಯಾವಾಗ ಹುದ್ದೆಗಳು ಖಾಲಿಯಾಗುತ್ತವೆ ಆಗೆಲ್ಲ ಹುದ್ದೆಗಳನ್ನು ತುಂಬುತ್ತಿರುತ್ತಾರೆ ಈಗಾಗಲೇ ಹೇಳಿದಂತೆ, 478 ಹುದ್ದೆಗಳಿಗೆ ಪ್ರಕಟಣೆ ಹೊರಡಿಸಲಾಗಿ ಅದರಲ್ಲಿ 312 ಹುದ್ದೆಗಳಿಗೆ ಈಗಾಗಲೇ

ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ 13,615 ಜನ ಇವತ್ತು appear ಆಗಿದ್ದಾರೆ ಆಮೇಲೆ, BMTC, KSRTC ಮತ್ತು Karnataka University ಇಲ್ಲಿ ಅವರು ಈ ಹುದ್ದೆಗಳು ಯಾವುವು reserve ಎಂದು ಕೇಳಿದ್ದಕ್ಕೆ ಅವರು ಮಾಹಿತಿಯನ್ನು ತಪ್ಪು ಕೊಟ್ಟಿದ್ದಕ್ಕೆ ಮತ್ತೊಂದು ಸಾರಿ ಇಲಾಖೆಯವರು ಮಾಹಿತಿ ಕಳುಹಿಸಿಕೊಟ್ಟಿದ್ದಾರೆ ಆ ಎಲ್ಲಾ ಮಾಹಿತಿಗಳನ್ನು correct ಮಾಡಿ ತಂದ ನಂತರ ಆ ಹುದ್ದೆಗಳನ್ನು ತುಂಬಲಿಕ್ಕೆ ಆದೇಶವನ್ನು ಮಾಡಲಾಗಿದೆ ಈಗಾಗಲೇ notified ಆಗಿದ್ದು 15,671 ಹುದ್ದೆಗಳು, selection ಆದದ್ದು 14,311 ಹುದ್ದೆಗಳು, recruitment ಆಗಬೇಕಾದ vacancy 2,832 ಮತ್ತು ಈಗ 491 ಹುದ್ದೆಗಳು notify ಆಗಬೇಕು ಇಷ್ಟು notify ಆಗಲಿಕ್ಕೆ ಇಲಾಖೆಯವರು ಎಲ್ಲಾ ಪ್ರಕ್ರಿಯೆ ನಡೆಸಿದ್ದಾರೆ ಇದೇನಾಗುತ್ತಿದೆ ಎಂದರೆ, ಇದು ದಿನದಿಂದ ದಿನಕ್ಕೆ ಅಂಕಿಗಳು ಹೆಚ್ಚು ಕಡಿಮೆಯಾಗುತ್ತವೆ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಎಲ್ಲಿಯೂ ನಿಂತಿಲ್ಲ ಹಿಂದಿನ ನಿಯಮವೇನಿತ್ತು ಆ ನಿಯಮದ ಪ್ರಕಾರ ಎಲ್ಲಾ Backlog ಹುದ್ದೆಗಳನ್ನು ತುಂಬಲಾಗುವುದು ಪ್ರಕ್ರಿಯೆ ನಡೆದಿದೆ ಪ್ರಕ್ರಿಯೆ ನಡೆದಾಗ ಸ್ವಲ್ಪ ಹೆಚ್ಚು ಕಡಿಮೆ ಇರುತ್ತದೆ ಅವೆಲ್ಲವನ್ನು ಸರಿಯಾದ ರೀತಿಯಿಂದ ತುಂಬಲಿಕ್ಕೆ ಇಲಾಖೆ ಕಾರ್ಯಕ್ರಮ ಹಾಕಿಕೊಂಡಿದೆ ಯಾವುದೇ Backlog ಹುದ್ದೆಯನ್ನು ತುಂಬದೇ ಇರಲಾರದಂತೆ ವ್ಯವಸ್ಥೆಯನ್ನು ಮಾಡಲಾಗುವುದು

ಶ್ರೀ ಆರ್ ಧ್ರುವ ನಾರಾಯಣ ಮಾನ್ಯ ಅಧ್ಯಕ್ಷರೆ, 17,021 ಹುದ್ದೆಗಳು ಖಾಲಿ ಇವೆ ಎಂದು ಸಮಾಜ ಕಲ್ಯಾಣ ಇಲಾಖೆ ಗುರುತಿಸಿದೆ ಅದರಲ್ಲಿ 13,615 ಹುದ್ದೆಗಳನ್ನು ಭರ್ತಿ ಮಾಡಿದೆ ಎಂಬ ಉತ್ತರವನ್ನು ತಾವು ಕೊಟ್ಟಿದ್ದೀರಿ ಉಳಿಕೆ 3,406 ಹುದ್ದೆಗಳು ಖಾಲಿ ಇವೆ ಎಂಬುದನ್ನು ತಾವು ಸದನದಲ್ಲಿ ಒದಗಿಸಿಲ್ಲ ಈ ಹುದ್ದೆಗಳನ್ನು ತಾವು ಆದಷ್ಟು ಶೀಘ್ರದಲ್ಲಿ ತುಂಬಬೇಕು ಏಕೆಂದರೆ, ಸರ್ಕಾರಿ ಇಲಾಖೆ ಹೊರತುಪಡಿಸಿ ಬೇರೆ ಸ್ವಾಯತ್ತ ಇಲಾಖೆ ಇರಬಹುದು (autonomous bodies) ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿರಬಹುದು ಇವೆಲ್ಲವೂ ಕೂಡ Backlog ಹುದ್ದೆಗಳನ್ನು ತಕ್ಷಣದಲ್ಲೇ ಭರ್ತಿ ಮಾಡತಕ್ಕಂಥ ಕ್ರಮವನ್ನು ತಾವು ಕೈಗೊಳ್ಳಬೇಕು ತಾವು ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು 186 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿರತಕ್ಕಂಥದ್ದು ಇದೆ 3,400 ಹುದ್ದೆಗಳು ಖಾಲಿ ಇವೆ ಒಂದು ವರ್ಷದಿಂದ ಕೇವಲ 186 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆಂದರೆ ಇದರಲ್ಲಿ

ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ, ತಾವು ಬಹಳ ವಿಳಂಬ ನೀತಿಯನ್ನು ಅನುಸರಿಸಿದ್ದೀರಿ ತಾವು ತಕ್ಷಣವೇ ಆದೇಶ ಹೊರಡಿಸಿ ಇಂತಿಷ್ಟು ಸಮಯದಲ್ಲಿ ಖಾಲಿ ಇರುವ 3,400 ಹುದ್ದೆಗಳನ್ನು ಭರ್ತಿ ಮಾಡುವ ಕ್ರಮವನ್ನು ತಕ್ಷಣವೇ ತಾವು ಕೈಗೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖೇನ ತಮ್ಮ ಗಮನ ಸೆಳೆಯುತ್ತೇನೆ

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಮಾನ್ಯ ಅಧ್ಯಕ್ಷರೆ, ಖಾಲಿ ಇರುವ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಅಥವಾ ತಿಂಗಳಲ್ಲಿ ಭರ್ತಿ ಮಾಡುತ್ತಾರೆನ್ನುವುದನ್ನು ಕೂಡ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ನಾನು ಒತ್ತಾಯವನ್ನು ಮಾಡುತ್ತೇನೆ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಧ್ರುವ ನಾರಾಯಣರವರು ಹೇಳುವುದು ನಿಜ ಆದರೆ, ಪ್ರಕ್ರಿಯೆಯಲ್ಲಿ ತೊಂದರೆಯಾಗಿಲ್ಲ, ತಡವಾಗಿಲ್ಲ ಎಲ್ಲ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಆಗಲೇ 15,671 ಹುದ್ದೆಗಳನ್ನು notify ಮಾಡಿ, ಈಗ 14,315 ಹುದ್ದೆಗಳಿಗೆ selection ಆಗಿದೆ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಸಚಿವರಲ್ಲಿ ತಪ್ಪು ಮಾಹಿತಿ ಇದೆ ಅದನ್ನು ಮೊದಲು ಸರಿಪಡಿಸಲಿ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಇದರಲ್ಲಿ ಹೆಚ್ಚು ಕಡಿಮೆಯಾಗಿದೆ ಮಾಹಿತಿಯನ್ನು correct ಆಗಿ ಹೇಳುತ್ತೇನೆ

(ಗೊಂದಲ)

ಅಧ್ಯಕ್ಷರು ಪ್ರಶ್ನೋತ್ತರ ವೇಳೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಾನು ನಿಮಗೆಲ್ಲ ಹೇಳಬೇಕಾಗಿಲ್ಲ ನೀವೆಲ್ಲ ಹಿರಿಯ ಸದಸ್ಯರು ಮತ್ತೆ ಮತ್ತೆ ನಿಂತುಕೊಂಡು ನೀವು ಇಷ್ಟ ಬಂದ ರೀತಿಯಲ್ಲಿ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ ಎರಡು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ ಬೇರೆಯವರಿಗೆ ಒಂದು ಅವಕಾಶವಿದೆ ನೀವು ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಅಧ್ಯಕ್ಷರೆ, Backlog ಹುದ್ದೆಗಳನ್ನು ತುಂಬಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದು

ಡಾ॥ ಹೆಚ್ ಸಿ ಮಹಾದೇವಪ್ಪ ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು ಮಾನ್ಯ ಮಹಾದೇವಪ್ಪನವರೆ, ಏಕೆ ಈ ರೀತಿ ಅಡ್ಡಿ ಮಾಡುತ್ತಿದ್ದೀರಿ?

ಡಾ ಹೆಚ್ ಸಿ ಮಹಾದೇವಪ್ಪ ಈಗ 15,000 ಹುದ್ದೆಗಳು notify ಆಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳುತ್ತಿದ್ದಾರೆ

ಅಧ್ಯಕ್ಷರು ಈಗ ನೋಡಿ ಸ್ವಾಮಿ, ಅವರ ಉತ್ತರವೇನೇ ಇರಲಿ

ಡಾ ಹೆಚ್ ಸಿ ಮಹಾದೇವಪ್ಪ 2003ರಲ್ಲಿ ಇಷ್ಟು ಹುದ್ದೆಗಳನ್ನು identify ಮಾಡಿದ್ದೇವೆಂದು ಹೇಳುತ್ತೀರಿ ಆಗ ಅಷ್ಟು ಹುದ್ದೆಗಳೆಂದು ಹೇಳುತ್ತೀರಿ, ಈಗ ಇಷ್ಟು ಹುದ್ದೆಗಳೆಂದು ಹೇಳುತ್ತೀರಿ ಯಾವ ತರಹ ನೀವು ಲೆಕ್ಕ ಕೊಡುತ್ತೀರಿ? ತಪ್ಪು ತಪ್ಪು ಮಾಹಿತಿ ಒದಗಿಸುತ್ತಿದ್ದೀರಿ

(ಗೊಂದಲ)

ಅಧ್ಯಕ್ಷರು ಈಗ ದಯಮಾಡಿ ಎಲ್ಲ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು ನಿಮಗೆ ಆ ಉತ್ತರ ತೃಪ್ತಿ ತಂದುಕೊಡದೇ ಇರಬಹುದು (ಗೊಂದಲ) ಅದು ವಿವರವಾಗಿಲ್ಲದೇ ಇರಬಹುದು ಆದರೆ, ಮೂರು ಉಪ ಪ್ರಶ್ನೆ ಕೇಳುವುದಕ್ಕೆ ಮಾತ್ರ ಅವಕಾಶವಿದೆ ದಯಮಾಡಿ, ಅರ್ಧ ಮಾಡಿಕೊಳ್ಳಿ ಒಂದು ಗಂಟೆಯೊಳಗಡೆ ಪ್ರಶ್ನೋತ್ತರ ಮುಗಿಯಬೇಕು ಆದರೆ, ನೀವು ಎಲ್ಲ ಕೇಳುವುದಕ್ಕೆ ಅವಕಾಶವಿಲ್ಲ , ದಯಮಾಡಿ, ಅದನ್ನು ಅರ್ಧ ಮಾಡಿಕೊಳ್ಳಬೇಕು

ಶ್ರೀ ನೆಲ ನರೇಂದ್ರಬಾಬು ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕೊಟ್ಟರೆ ಹಕ್ಕುಚ್ಯುತಿಯಾಗುತ್ತದೆ

ಅಧ್ಯಕ್ಷರು ಮಾನ್ಯ ಸಚಿವರು Final ಆಗಿ ಹೇಳಿಬಿಡಿ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಸದಸ್ಯರು ಹೇಳಿದ ಹಾಗೆ, ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು backlog ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು

ಅಧ್ಯಕ್ಷರು ಆಯಿತು

ಶ್ರೀ ಆರ್ ಧ್ರುವ ನಾರಾಯಣ ಸಮಯ ನಿಗದಿಪಡಿಸಬೇಕು

(ಗೊಂದಲ)

ಅಧ್ಯಕ್ಷರು ಇಲ್ಲ, ಇಲ್ಲ, ಸಾಕಷ್ಟು ಅವಕಾಶ ಕೊಟ್ಟಿದ್ದೇನೆ, ಕುಳಿತುಕೊಳ್ಳಿ ಕ್ಯಾತ್ಸಂದ್ರ ರಾಜಣ್ಣರವರು ಇಲ್ಲವೇ? ನೀವು ನಿಮ್ಮ ಪ್ರಶ್ನೆ ಕೇಳಿ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಅದೂ ಮುಖ್ಯವಾದುದೇ ಒಂದು ವಿಚಾರ ಚರ್ಚೆಯಾಗುವಾಗ ನಾವೇಕೆ ಅಡ್ಡಿ ಮಾಡಬೇಕು?

ಅಧ್ಯಕ್ಷರು ಮಾನ್ಯ ರಾಜಣ್ಣನವರೆ, ನೀವು ಪ್ರಶ್ನೆ ಕೇಳುತ್ತೀರಾ? ಅಥವಾ ಕುಳಿತುಕೊಳ್ಳುತ್ತೀರಾ?

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಸ್ವಾಮಿ, ನನ್ನ ಪ್ರಶ್ನೆ ಎಷ್ಟು ಮುಖ್ಯವೋ, ಅದೂ ಕೂಡ ಮುಖ್ಯವಾಗುತ್ತದೆ

ಅಧ್ಯಕ್ಷರು ಬಹಳ ಮುಖ್ಯ ಸ್ವಾಮಿ ಆದರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು ಬೇರೆ ರೂಪದಲ್ಲಿ ಆ ವಿಚಾರವನ್ನು ಎತ್ತಬಹುದು

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ನೀವು ಮಧ್ಯೆ ಮಧ್ಯೆ ಹಾರಿಸಿಬಿಡುತ್ತಿದ್ದೀರಲ್ಲ, ನಾನು ಇನ್ನೂ ನನ್ನ turn ಬಂದಿಲ್ಲವೆಂದು ಕುಳಿತಿದ್ದೇನೆ ಅಷ್ಟೆ

ಅಧ್ಯಕ್ಷರು ಆ ರೀತಿ ಮುಖ್ಯವೆಂದರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಹೇಗೆ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ?

ಕೊಳವೆ ಬಾವಿಗಳ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸುವುದು

38 (209) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಎರಡು ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ನಿಗಮಗಳವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು ,

ಆ) ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ ,

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊರೆದ ಕೊಳವೆ ಬಾವಿಗಳ ಸಂಖ್ಯೆ

ಕ್ರ.ಸಂ	ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1	2003–04	360
2	2004–05	845
3	2005–06	872